**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 1728/2017**

| | | |
|---|---|---|
| ಹೆಸರು | ಭಾಗ್ಯಮ್ಮ | ಪ್ರಾ.ಸಾ.3 |
| ಗಂಡನ ಹೆಸರು | ಮುನಿಯಪ್ಪ | ಚಾ.ಸಾ.1 |
| ವಯಸ್ಸು | 42 ವರ್ಷ | |
| ಕೆಲಸ | ನರ್ಸ್ | ಸಾ.ಪ್ರ.ವ.ಬೋ |
| ವಾಸ | ಲಿಂಗಾಪುರ | ದಿ: 08.11.2022 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ: –**

ಚಾ.ಸಾ.2 ನನ್ನ ಮಗಳು. ದಿ:13.03.2017 ರಂದು ಬೆಳಿಗ್ಗೆ 10.30 ಗಂಟೆಗೆ ನಾನು ಮತ್ತು ನನ್ನ ಮಗಳು ನೀರು ತರಲು ಬೋರ್‌ವೆಲ್‌ಗೆ ಹೋಗಿದ್ದು, ನಾವು ತೊಳೆದಿಟ್ಟ ಬಿಂದಿಗೆಯನ್ನು ಕಾಲಿನಿಂದ ಒದ್ದು ಚರಂಡಿಯಲ್ಲಿ ಬೀಳಿಸಿದರು. ಅಲ್ಲಿಯೇ ಇದ್ದ 2ನೇ ಆರೋಪಿ ನೀಲಗಿರಿ ಮರದ ತುಂಡನ್ನು ತೆಗೆದುಕೊಂಡು ಬಂದು ನನಗೆ ಮತ್ತು ಚಾ.ಸಾ.2ರವರಿಗೆ ತಮ್ಮ ಮನಸ್ಸಿಗೆ ಬಂದಂತೆ ಹೊಡೆದರು. ನಂತರ ನನಗೆ ಮತ್ತು ಚಾ.ಸಾ.2ರವರಿಗೆ ಪ್ರಜ್ಞೆ ತಪ್ಪಿತ್ತು. ನಂತರ ಸ್ವಲ್ಪ ಸಮಯದ ಬಳಿಕ ನಾವು ಚೇತರಿಸಿಕೊಂಡೆವು. ನಂತರ ಅಲ್ಲಿಯೇ ಇದ್ದ ಮಹಿಳೆ ನಮಗೆ ಅರಿಶಿನ ಹಚ್ಚಲು ಬಂದರು. ಆದರೆ ನಾವು ಹಚ್ಚಿಸಿಕೊಳ್ಳಲಿಲ್ಲ. ಜಗಳದಲ್ಲಿ ಆರೋಪಿಗಳು ನಾನು ಧರಿಸಿದ್ದ ಆಭರಣಗಳನ್ನು ಕಿತ್ತುಹಾಕಿದ್ದರು. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ಸಾಕ್ಷಿ ದಿ: 13.03.2017ರ ದೂರನ್ನು ನೋಡಿ ಗುರ್ತಿಸಿದ್ದು, ಸದರಿ ದೂರನ್ನು ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3[ಎ] ಎಂದು ಗುರ್ತಿಸಲಾಯಿತು. ನಂತರ ಪೊಲೀಸರು ಸಂಜೆ 4.00 ಗಂಟೆಗೆ ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿದರು. ಆಗ ಊರಿನ ಜನರು ಹಾಗೂ ಚಾ.ಸಾ.3 ಸ್ಥಳದಲ್ಲಿದ್ದರು. ಸಾಕ್ಷಿ ನಿ.ಪಿ.1 ಮಹಜರ್‌ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.1[ಸಿ] ಎಂದು ಗುರ್ತಿಸಲಾಯಿತು. ಆರೋಪಿಗಳನ್ನು ನೋಡಿ ಗುರ್ತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ನೀಲಗಿರಿ ಮರದ ತುಂಡನ್ನು ನೋಡಿ ಗುರ್ತಿಸಿದ್ದು, ಅದನ್ನು ಮು.ಮ.1 ಎಂದು ಗುರ್ತಿಸಲಾಯಿತು. ಘಟನಾ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ ಮುನಿರಾಜುರವರ ಮನೆ, ಪಶ್ಚಿಮಕ್ಕೆ ಮಂಜುನಾಥರವರ ಮನೆ, ಉತ್ತರಕ್ಕೆ ತಾವರೆಕರೆ ರಸ್ತೆ, ದಕ್ಷಿಣಕ್ಕೆ ಸರ್ಕಾರಿ ಜಮೀನು ಇರುತ್ತದೆ.

**ಪಾಟೀ ಸವಾಲು : ಆರೋಪಿಗಳ ಪರ ವಕೀಲರಿಂದ : –**

ನಾನು ಪ್ರಸ್ತುತ ಯಾವುದೇ ಉದ್ಯೋಗ ಮಾಡುತ್ತಿಲ್ಲ. ಘಟನೆ ನಡೆದ ದಿನ ನೀರು ತೆಗೆದುಕೊಳ್ಳಲು ನಾನು, ಚಾ.ಸಾ.2, ಆರೋಪಿಗಳು ಹೋಗಿದ್ದೆವು. ಗಲಾಟೆ ನಡೆದಾಗ ಸುಮಾರು 25–50 ಜನ ಸೇರಿದ್ದರು. ಸದರಿ ಜನರ ಹೆಸರುಗಳು ಗೊತ್ತಿಲ್ಲ. ನಾನು 02, ನನ್ನ ಮಗಳು 01 ಬಿಂದಿಗೆಗಳನ್ನು ತೆಗೆದುಕೊಂಡು ಹೋಗಿದ್ದೆವು. ನಿ.ಪಿ.3ರ ವಿಚಾರಗಳು ಗೊತ್ತಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದನ್ನು ನನ್ನ ಮಗಳು ಬರೆದಿರುತ್ತಾಳೆ ಎನ್ನುತ್ತಾರೆ. ದಿ:13.03.2017ರಂದು

ಸುಮಾರು 3 ಗಂಟೆಗೆ ಆಸ್ಪತ್ರೆಗೆ ನಮ್ಮ ಯಜಮಾನರು ಕರೆದುಕೊಂಡು ಹೋಗಿರುತ್ತಾರೆ. ನಾವು ಆಸ್ಪತ್ರೆಗೆ ಹೋದಾಗ ಅಲ್ಲಿ ಆಗಲೆ 4–5 ಜನ ರೋಗಿಗಳಿದ್ದರು. ಸುಮಾರು ಒಂದೂವರೆ ಗಂಟೆ ಚಿಕಿತ್ಸೆ ಪಡೆದಿರುತ್ತೇವೆ. ವೈದ್ಯರಿಗೆ ನಮ್ಮ ಯಜಮಾನರು ನಮ್ಮನ್ನು ಕರೆದುಕೊಂಡ ಹೋದ ಬಗ್ಗೆ ಮಾಹಿತಿ ನೀಡಿರುತ್ತಾರೆ. ಘಟನೆ ನಡೆದ ಮರುದಿನ ದೂರು ನೀಡಿರುತ್ತೇವೆ. ನಿ.ಪಿ.3ನ್ನು ನೀಡಲು ನಾನು ನನ್ನ ಮಗಳು ಇಬ್ಬರೇ ಹೋಗಿದ್ದೆವು. ದೂರು ನೀಡಿದ ದಿನ ಸಂಜೆ 4.00 ಗಂಟೆಗೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಆಗ ಸ್ಥಳದಲ್ಲಿ 10–15 ಜನರಿದ್ದರು. ಸದರಿ ಜನರ ಬಗ್ಗೆ ನನಗೆ ಗೊತ್ತಿಲ್ಲ. ಘಟನಾ ಸ್ಥಳದ ಪೂರ್ವ, ಪಶ್ಚಿಮದಲ್ಲಿರುವ ಮನೆಯ ಸದಸ್ಯರು ಬಂದಿರಲಿಲ್ಲ. ಆರೋಪಿಗಳು ನನಗೆ ದೊಣ್ಣೆಯಿಂದ ಹೊಡೆದಿದ್ದು ಜ್ಞಾಪಕವಿದ್ದು, ನ್ಯಾಯಾಲಯದ ಮುಂದಿರುವ ಮು.ಮ.1 ಅದೇ ಆಗಿರುತ್ತದೆ. ಮು.ಮ.1ರಂತಹ ದೊಣ್ಣೆ ಸಾಮಾನ್ಯವಾಗಿ ರೈತರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ. ನಮಗೂ ಆರೋಪಿಗಳಿಗೂ ಯಾವುದೇ ಗಲಾಟೆಯಾಗಿಲ್ಲ, 2ನೇ ಆರೋಪಿ ನನಗೆ ಮತ್ತು ಚಾ.ಸಾ.2ರವರಿಗೆ ಮು.ಮ.1ರಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ದೂರು ನೀಡಿದ ಮೇಲೆ ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಮು.ಮ.1ನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.1ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಸಂಬಂಧಿಕರಲ್ಲ. 2ನೇ ಆರೋಪಿ ನನ್ನ ಅಳಿಯ ಎಂದರೆ ಸರಿಯಲ್ಲ. ನಾನು 2ನೇ ಆರೋಪಿಗೆ ನನ್ನ ಮಗಳನ್ನು ಮದುವೆ ಮಾಡಿಕೊಳ್ಳುವಂತೆ ಕೇಳಿದ್ದು, ಅವರು ಒಪ್ಪದೆ ಇದ್ದ ಕಾರಣ ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನದಿಂದ ನಮ್ಮ ಆರೋಪಿಗಳ ನಡುವೆ ವೈಷಮ್ಯ ಇರುತ್ತದೆ ಎಂದರೆ ಸರಿ. ಸದರಿ ವೈಷಮ್ಯದಿಂದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಮಗೆ ಯಾವುದೇ ಗಾಯವಾಗಿಲ್ಲ ಮತ್ತು ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ಸಮಯದಲ್ಲಿ ಆರೋಪಿಗಳು ನನ್ನ ಆಭರಣಗಳನ್ನು ಕಿತ್ತುಹಾಕಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನನ್ನ ಆಭರಣ ಸ್ಥಳದಲ್ಲಿ ಬಿದ್ದಿದ್ದನ್ನು ಫೋಟೋ ತೆಗೆದುಕೊಂಡಿರುತ್ತಾರೆ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**